ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ,

ಮುಳಬಾಗಿಲು

ಸಿ.ಸಿ. ಸಂಖ್ಯೆ: 1493 /2025

ಸಿ.ಡಬ್ಲ್ಯೂ:2 /ಪಿ.ಡಬ್ಲ್ಯೂ: 2

ಪ್ರಮಾಣೀಕರಿಸಿದ ದಿನಾಂಕ: 13.07.2026

| | |
|---|---|
| ಹೆಸರು | ಮುನಿಸ್ವಾಮಿ |
| ತಂದೆ/ಗಂಡನ ಹೆಸರು | ಲೇಟ್ ಕಂಬಪ್ಪ |
| ವಯಸ್ಸು | 68 |
| ವೃತ್ತಿ | ನಿವೃತ್ತ ಮುಖ್ಯ ಪೇದೆ |
| ವಾಸ | ಮುಳಬಾಗಿಲು |

ಮುಖ್ಯ ವಿಚಾರಣೆ:- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:-

ಚಾಸಾ 1 ಮತ್ತು 2 ರವರು ಗೊತ್ತು . ದಿನಾಂಕ 28.10.2024 ರಂದು ಪೋಲಿಸರು ಕಳ್ಳತನವಾದ ವಿಚಾರಕ್ಕೆ ಕೃತ್ಯ ನಡೆದ ಸ್ಥಳಕ್ಕೆ ಬಂದಿದ್ದು ಮಹಜರ್ ಗೆ ನನ್ನ ಸಹಿ ಪಡೆದಿರುತ್ತಾರೆ. ನಿಪಿ 2 ರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಸಹಿಯನ್ನು ನಿಪಿ 2 (ಬಿ ) ಎಂದು ಗುರುತಿಸಲಾಯಿತು. ದಿನಾಂಕ 21.04.2024 ರಂದು ಕೃತ್ಯ ನಡೆದ ಸ್ಥಳದಲ್ಲಿ ಪೋಲಿಸರು ಅರೋಪಿಯನ್ನು ಕರೆದುಕೊಂಡು ಬಂದಿದ್ದು ಅಲ್ಲಿ ಮಹಜರ್ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಸದರಿ ಮಹಜರ್ ನ್ನು ನಿಪಿ3 ಎಂದು ಸಾಕ್ಷಿಯ ಸಹಿಯನ್ನು ನಿಪಿ 3 (ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗಳನ್ನು ಯಾವ ಸಮಯಕ್ಕೆ ಮಾಡಿರುತ್ತಾರೆಂದು ಗೊತ್ತಿಲ್ಲ. ಅರೋಪಿ ಗೊತ್ತಿಲ್ಲ.

(ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲು:- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:-

ನಿಪಿ 2 ನ್ನು ಸಂಜೆ 6.00 ರಿಂದ 7.00 ವರೆಗೆ ಹಾಗೂ ನಿಪಿ 3 ನ್ನು ಮದ್ಯಾಹ್ನ 12.00 ರಿಂದ 1.00 ರವರೆಗೆ ಜರುಗಿಸಿರುತ್ತಾರೆ ಎಂದರೆ ನೆನಪಿಲ್ಲ.

ಪಾಟೀ ಸವಾಲು:- ಆರೋಪಿ ಪರ ವಕೀಲರಿಂದ:-

ನೀವು ನಿವೃತ್ತ ಪೋಲಿಸ್ ಅಗಿರುವ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 2 ಮತ್ತು 3 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಪಿ 2 ಮತ್ತು 3 ಕ್ಕೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ:- ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

(ಹರೀಶ್ ಜಿ )
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮುಳಬಾಗಿಲು

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ,

ಮುಳಬಾಗಿಲು

ಸಿ.ಸಿ. ಸಂಖ್ಯೆಃ 1493 /2025

ಸಿ.ಡಬ್ಲ್ಯೂ:1 /ಪಿ.ಡಬ್ಲ್ಯೂಃ 1

ಪ್ರಮಾಣೀಕರಿಸಿದ ದಿನಾಂಕಃ 13.07.2026

| | |
|---|---|
| ಹೆಸರು | ಸತೀಶ್ |
| ತಂದೆ/ಗಂಡನ ಹೆಸರು | ಕೃಷ್ಣಪ್ಪ |
| ವಯಸ್ಸು | 34 |
| ವೃತ್ತಿ | ಖಾಸಗಿ ಕೆಲಸ |
| ವಾಸ | ಮುಳಬಾಗಿಲು |

ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಚಾಸಾ 2 ಮತ್ತು 3 ರವರು ಗೊತ್ತಿಲ್ಲ. ನಮ್ಮ ಮನೆಯಲ್ಲಿ ಚಿನ್ನ ಮತ್ತು ಬೆಳ್ಳಿ ಅಭರಣಗಳು ವತ್ತು 2 ಲಕ್ಷ ನಗದು ನಾಪತ್ತೆಯಾಗಿರುವ ಬಗ್ಗೆ ಠಾಣೆಗೆ ದೂರು ನೀಡಿರುತ್ತೇನೆ. ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಸಹಿಯನ್ನು ನಿಪಿ 1 (ಎ) ಎಂದು ಗುರುತಿಸಲಾಯಿತು. ಪೋಲಿಸರು ನನ್ನ ಸಮಕ್ಷಮ ಯಾವುದೇ ಮಹಜರ್ ಜರುಗಿಸಿಲ್ಲ. ನಿಪಿ 1 ದೂರು ನೀಡಲು ಹೋದಾಗ ಮಹಜರಿಗೆ ನನಗೆ ಸಹಿ ಪಡೆದಿರುತ್ತಾರೆ. ದಿನಾಂಕ 28.10.2024 ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು ಸಹಿಯನ್ನು ನಿಪಿ 2 (ಎ) ಎಂದು ಗುರುತಿಸಲಾಯಿತು. ನಾನು ಯಾವುದೇ ಮುಂದುವರೆದ ಹೇಳಿಕೆಯನ್ನು ನೀಡಿರುವುದಿಲ್ಲ. ಅರೋಪಿ ಗೊತ್ತಿರುವುದಿಲ್ಲ.

(ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ದಿನಾಂಕ 27.10.2024 ಸಂಜೆ 7.00 ಗಂಟೆಗೆ ಮನೆಗೆ ಬೀಗ ಹಾಕಿಕೊಂಡು ಕುಟುಂಬ ಸಮೇತ ಶಿಡ್ಲಘಟ್ಟ ತಾಲ್ಲೂಕಿನ ಕುಂದಲಗುರ್ಕಿ ಗ್ರಾಮದಲ್ಲಿ ಕಾರ್ಯಕ್ರಮಕ್ಕೆ ಹೋಗಿದ್ದು ದಿನಾಂಕ 28.10.2024 ರಂದು ಸಂಜೆ 6.00 ಕ್ಕೆ ಚಾಸಾ 3 ರವರು ಪೋನ್ ಮಾಡಿ ದಿನಾಂಕ 27.10.2024 ರಂದು ರಾತ್ರಿ ಯೋರೋ ಕಳ್ಳರು ಬಾಗಿಲು ಡೋರ್ ನ್ನು ಕಿತ್ತು ಹಾಕಿ ಕಳ್ಳತನ ಮಾಡಿರುವ ವಿಚಾರ ತಿಳಿಸಿದ್ದು ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಮನೆಯಲ್ಲಿದ್ದ ಬಂಗಾರದ ಕತ್ತಿನ ಚೈನು , 4 ಉಂಗುರುಗಳು , ಮಾಟಿ , ಚಿಕ್ಕಮಕ್ಕಳ ಉಂಗುರುಗಳ , ಕತ್ತಿನ ಓಳೆ , ಜುಮುಕಿ 2 ಲಕ್ಷ ನಗದು ಹಾಗೂ 150 ಗ್ರಾಂ ಬೆಳ್ಳಿ ವಸ್ತುಗಳು ಕಳ್ಳತನ ವಾಗಿರುವ ಬಗ್ಗೆ ನಿಪಿ 1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಅವು ನಾಪತ್ತೆಯಾಗಿರುತ್ತದೆ. ದಿನಾಂಕ 28.10.2024 ರಂದು ಕೃತ್ಯ ನಡೆದ ಸ್ಥಳಕ್ಕೆ ಪೋಲಿಸರು ಬಂದು ನಾನು ತೋರಿಸಿದ ಸ್ಥಳದಲ್ಲಿ ಚಾಸಾ 2 ಮತ್ತು 3 ರವರ ಸಮಕ್ಷಮ ಸಂಜೆ 6.00 ರಿಂದ 7.00 ವರೆಗೆ ನಿಪಿ 2 ರಂತೆ ಪಂಚನಾಮೆ ಜರುಗಿಸಿರುತ್ತಾರೆ ಹಾಗೂ ಸ್ಥಳದಲ್ಲಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 5.09.2024 ರಂದು ಹಾಗೂ ದಿನಾಂಕ 24.04.2025 ರಂದು ಈಗ ಓದಿ ಹೇಳಿದಂತೆ ತನಿಖಾಧಿಕಾರಿಗಳ ಮುಂದೆ 2 ಮುಂದುವರೆದ ಹೇಳಿಕೆಗಳನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿರಾಕರಿಸಿದ ಹೇಳಿಕೆಗಳನ್ನು ನಿಪಿ 3 ಮತ್ತು 4 ಎಂದು ಸಹಿಗಳನ್ನು ನಿಪಿ 3 (ಎ) ಮತ್ತು 4 (ಎ) ಎಂದು ಗುರುತಿಸಲಾಯಿತು. ನಿಪಿ 1 ರಿಂದ 4 ರಲ್ಲಿರುವ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

<u>ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ- ಇಲ್ಲಾ</u>

<u>ಮರುವಿಚಾರಣೆಃ- ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

(ಹರೀಶ್ ಜಿ )
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮುಳಬಾಗಿಲು